ಸಾಕ್ಷಿಯನ್ನು ದಿಃ**25.01.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಡಿ ಹೆಚ್ ಆರ್ ಪರ ಶ್ರೀ ಕೆ ಸಿ ಬಿ ವಕೀಲರಿಂದಃ–**

ನನ್ನ ತಂದೆ ಕಾಂತರಾಜು ತೀರಿಹೋಗಿ 20 ವರ್ಷವಾಯಿತು. ನನ್ನ ತಂದೆಗೆ ಒಂದು ಮನೆ ಆಸ್ತಿ ಮಾತ್ರ ಇತ್ತು. ನನ್ನ ತಂದೆ ತೀರಿಹೋದಾಗಿನಿಂದ ಇಲ್ಲಿಯವರೆಗೆ ಅವರ ಆಸ್ತಿಗಳಲ್ಲಿ ಭಾಗ ಬರಬೇಕೆಂದು ದಾವೆ ಹಾಕಿದ್ದೀರಾ ಎಂದರೆ ಈಗ ಹಾಕಿದ್ದೇನೆ. ಈ ಅರ್ಜಿಯನ್ನು ಹೊರತುಪಡಿಸಿ ಭಾಗಾಂಶ ಬೇಕೆಂದು ಬೇರೆ ದಾವೆ ಹಾಕಿದ್ದೀರಾ ಎಂದರೆ ಇದೆ ಅರ್ಜಿಯಲ್ಲಿ ಭಾಗಾಂಶ ಕೇಳಿದ್ದೇನೆ. 1 ಮತ್ತು 2 ನೇ ಜೆ ಡಿ ಆರ್ ರವರ ವಿರುದ್ಧ ಡಿ ಹೆಚ್ ಆರ್ ರವರು ಸಲ್ಲಿಸಿದ ಅಸಲು ದಾವೆ ಸಂಖ್ಯೆ 67/2019 ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 67/2019 ರಲ್ಲಿ ಆದ ತೀರ್ಪು ಮತ್ತು ಡಿಕ್ರಿ ನನಗೆ ಬದ್ಧಪಡಿಸುವುದಿಲ್ಲ ಅದನ್ನು ರದ್ದುಗೊಳಿಸುವಂತೆ ದಾವೆ ಹೂಡಿದ್ದೀರಾ ಎಂದರೆ ಆ ಬಗ್ಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಅರ್ಜಿಯನ್ನು ನಾನೊಬ್ಬಳೆ ಸಲ್ಲಿಸಿದ್ದೇನೆ. ನನ್ನ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡುವಂತೆ ಅರ್ಜಿ ಸಲ್ಲಿಸಿಲ್ಲ.

ನನ್ನ ತಾಯಿಗೆ ಯಾವುದೇ ದುಷ್ಚಟ ಇರಲಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಮನೆಯ ವ್ಯವಹಾರಗಳನ್ನು ನನ್ನ ಅಣ್ಣ ನೋಡಿಕೊಳ್ಳುತ್ತಿದ್ದರು. ನನ್ನ ಅಣ್ಣ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳಲು ನನ್ನ ತಾಯಿ ಸಮ್ಮತಿ ಕೊಟ್ಟಿರಲಿಲ್ಲ. ನನ್ನ ತಾಯಿ ಮತ್ತು ನನ್ನ ಅಣ್ಣ ಸಹಿ ಹಾಕಿ ಡಿ ಹೆಚ್ ಆರ್ ರವರಿಗೆ ಆಧಾರ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ 27.05.2013 ರಂದು ನನ್ನ ತಾಯಿ ಮತ್ತು ನನ್ನ ಅಣ್ಣ ಅವರ ದರದ್ದು ನಿಮಿತ್ಯ ಆಸ್ತಿಯನ್ನು ಡಿ ಹೆಚ್ ಆರ್ ರವರ ಬಳಿ ರೂ 6 ಲಕ್ಷಕ್ಕೆ ಭೋಗ್ಯ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿಯಾಗಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈ ಪ್ರಕರಣದ ವಿಚಾರಣೆ 2021 ರಲ್ಲಿ ಈ ನ್ಯಾಯಾಲಯದಲ್ಲಿ ಪ್ರಾರಂಭಗೊಂಡಿದೆ ಎಂದರೆ ಗೊತ್ತಿಲ್ಲ. 2021 ರಲ್ಲಿ ನನ್ನನ್ನು ಪಕ್ಷಗಾರಳನ್ನಾಗಿ ಮಾಡುವಂತೆ ನಾನು ಅರ್ಜಿ ಹಾಕಿಕೊಂಡೆ ಎಂದರೆ ಇಲ್ಲ. ನನ್ನನ್ನು ಪಕ್ಷಗಾರಳನ್ನಾಗಿ ಮಾಡಿಕೊಳ್ಳುವಂತೆ ಎಷ್ಟು ವರ್ಷಗಳ ಹಿಂದೆ ಅರ್ಜಿ ಹಾಕಿದ್ದೇನೆಂದು ಗೊತ್ತಿಲ್ಲ.

ಡಿ ಹೆಚ್ ಆರ್ ರವರ ಹೆಸರಿಗೆ ಭೋಗ್ಯ ಬರೆದುಕೊಟ್ಟ ಪತ್ರದಲ್ಲಿರುವ ಆಸ್ತಿಯ ಖಾತೆ ನನ್ನ ತಂದೆಯ ಮರಣಾನಂತರ ನನ್ನ ತಾಯಿ ಮತ್ತು ನನ್ನ ಅಣ್ಣನ ಹೆಸರಿಗೆ ಆಗಿತ್ತು ಎಂದರೆ ಗೊತ್ತಿಲ್ಲ. ನನ್ನ ತಾಯಿ ಮತ್ತು ನನ್ನ ಅಣ್ಣನ ಹಸೆರಿನಲ್ಲಿ ಆಗಿರುವ ಖಾತೆಯನ್ನು ರದ್ದುಗೊಳಿಸುವಂತೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ನನಗೆ ಮದುವೆಯಾಗಿ 15 ವರ್ಷವಾಯಿತು. ಕಳೆದ 15 ವರ್ಷಗಳಿಂದ ನಾನು ಗಂಡನ ಮನೆಯಲ್ಲಿ ವಾಸಯಿದ್ದೇನೆ. ಡಿ ಹೆಚ್ ಆರ್ ರವರಿಗೆ ಭೋಗ್ಯ ಮಾಡಿಕೊಟ್ಟ ಸ್ವತ್ತಿನಲ್ಲಿ ನಾನು ಮದುವೆಯಾಗಿ ಹೋದ ನಂತರ ನನ್ನ ತಾಯಿ ಮಿಲ್ ಮತ್ತು ಚಿಲ್ಲರೆ ಅಂಗಡಿಯನ್ನು ನಡೆಸುತ್ತಿದ್ದರು ಎಂದರೆ ಸರಿ. ಮಿಲ್ ಮತ್ತು ಅಂಗಡಿಯನ್ನು ಜಪ್ತಿ

ಮಾಡಲು ನನ್ನ ತಕರಾರು ಇಲ್ಲ ಎಂದರೆ ಇದೆ. 2 ನೇ ಜೆ ಡಿ ಆರ್ ರವರನ್ನು ಬಂಧಿಸಿ ಡಿಕ್ರಿ ಹಣವನ್ನು ವಸೂಲಿ ಮಾಡಿಕೊಳ್ಳಲು ನನ್ನ ತಕರಾರು ಇಲ್ಲ. ನನ್ನ ತಂದೆ ಮಾಡಿದ ಸಾಲಕ್ಕಾಗಿ ಮತ್ತು ಮನೆಯ ದರದ್ದಿಗಾಗಿ ನನ್ನ ತಾಯಿ ಮತ್ತು ಅಣ್ಣ ಡಿಕ್ರಿ ಆಸ್ತಿಯನ್ನು ಡಿ ಹೆಚ್ ಆರ್ ರವರಿಗೆ ಭೋಗ್ಯ ಮಾಡಿದ್ದರು ಎಂದರೆ ಗೊತ್ತಿಲ್ಲ. ಮನೆಯನ್ನು ಮಾರಾಟ ಮಾಡಿ ಡಿ ಹೆಚ್ ಆರ್ ರವರಿಗೆ ಹಣ ಕೊಡಬೇಕಾಗುತ್ತೆಂದು ನಾನು, ನನ್ನ ತಾಯಿ ಮತ್ತು ಅಣ್ಣ ಶಾಮೀಲಾಗಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಣ್ಣ ದುಷ್ಚಟಗಳನ್ನು ಹೊಂದಿದ ಬಗ್ಗೆ ಕ್ರಿಮಿನಲ್ ಪ್ರಕರಣದ ಇದೆಯೇ ಇಲ್ಲವೇ ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಕುಡಿಯುವ ಮತ್ತು ಇಸ್ಪೀಟ್ ಆಡುವ ದುಷ್ಚಟ ಇಲ್ಲ ಎಂದರೆ ಸರಿಯಲ್ಲ. ಅಂತಹ ಕೆಟ್ಟ ಅಭ್ಯಾಸ ಇಲ್ಲದೆ ಇದ್ದರೂ ಕೂಡ ನಾನು ಸೃಷ್ಠನೆ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ ಹೆಚ್ ಆರ್ ರವರಿಗೆ ಡಿಕ್ರಿಯ ಹಣ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನನ್ನ ತಾಯಿ ಮತ್ತು ನನ್ನ ಅಣ್ಣ ನನ್ನನ್ನು ಎತ್ತಿಕಟ್ಟಿ ನನ್ನ ಮೂಲಕ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಡಿ ಹೆಚ್ ಆರ್ ರವರಿಗೆ ಡಿಕ್ರಿಯ ಮೂಲಕ ಕೊಡಬೇಕಾದ ಹಣವನ್ನು ಲಪಾಟಿಯಸಬೇಕೆಂದು ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಕ್ಕಿದ್ದರೆ ವಿಭಾಗದ ದಾವೆಯನ್ನು ಹಾಕುತ್ತಿದ್ದೆ, ನಾನು ವಿಭಾಗದ ದಾವೆಯನ್ನು ಹಾಕದೆ ಡಿ ಹೆಚ್ ಆರ್ ರವರಿಗೆ ಮೋಸ ಮಾಡಬೇಕೆಂದು ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಡಿ ಹೆಚ್ ಆರ್ ರವರು ಪಡೆದುಕೊಂಡ ಡಿಕ್ರಿಯನ್ನು ಯಾವುದೇ ನ್ಯಾಯಾಲಯದಲ್ಲಿ ನಾನು ಇಲ್ಲಿಯವರೆಗೆ ಪ್ರಶ್ನೆ ಮಾಡಿಲ್ಲ ಎಂದರೆ ನನಗೆ ಈಗ ಗೊತ್ತಾಗಿದ್ದರಿಂದ ಈ ಅರ್ಜಿ ಸಲ್ಲಿಸಿದ್ದೇನೆ. ನನ್ನ ತಾಯಿ ಮತ್ತು ಅಣ್ಣ ಡಿ ಹೆಚ್ ಆರ್ ರವರಿಗೆ ಭೋಗ್ಯ ಪತ್ರ ಮಾಡಿಕೊಟ್ಟಿರುವ ವಿಚಾರ ಹಾಗೂ ಡಿ ಹೆಚ್ ಆರ್ ರವರ ಅಸಲು ದಾವೆ ಸಂಖ್ಯೆ 67/2019 ನ್ನು ದಾಖಲಿಸಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ದಿನಾಂಕ 20.02.2021 ರಂದು ಅಸಲು ದಾವೆ ಸಂಖ್ಯೆ 67/2019 ರಲ್ಲಿ ಡಿ ಹೆಚ್ ಆರ್ ರವರ ಪರ ತೀರ್ಪು ಮತ್ತು ಡಿಕ್ರಿಯಾಗಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 67/2019 ರಲ್ಲಿ ಎರಡು ಕಡೆ ವಿಚಾರಣೆ ನಡೆದು ತೀರ್ಪು ಕೊಟ್ಟಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಡಿ ಹೆಚ್ ಆರ್ ರವರಿಗೆ ಮೋಸ ಮಾಡಿ ಅನ್ಯಥಾ ಫಾಯಿದೆ ಹೊಂದಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸ ಇದೆ.

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.